ಊ) ಇಲ್ಲ

ಋ) ಉದ್ಭವಿಸುವುದಿಲ್ಲ

ಶೀ ಸಿದ್ದು ಸವದಿ ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಮಸ್ಯೆ ತಮಗೆ ತಿಳಿದ ಹಾಗೆ ಕಬ್ಬಿನ ಕಟಾವನ್ನು ಯಾವುದೇ ಕಾರ್ಖಾನೆಯವರು ಮಾಡುತ್ತಿಲ್ಲ ಸುಮಾರು ಎರಡು ವರ್ಷ ಕಳೆದರೂ ಸಹ ಯಾವುದೋ ಒಂದು ನೆಪ ಹೇಳಿ ನೂರಕ್ಕೆ 15 ರಿಂದ 25 ಪರ್ಸೆಂಟ್‌ನವರೆಗೆ cut ಮಾಡಿ ರೈತರು ಹಾನಿ ಅನುಭವಿಸುವಂತಹ ಪರಿಸ್ಥಿತಿ ಬಂದೊದಗಿದೆ ಸರ್ಕಾರ ರೈತರ ಸಹಾಯಕ್ಕೆ ಬಂದು ಅವರಿಗೆ ಪರಿಹಾರ ಒದಗಿಸಿಕೊಡಬೇಕೆಂದು ಮಾನ್ಯ ಸಕ್ಕರೆ ಸಚಿವರಿಗೆ ಪರಿಹಾರವನ್ನು ಕೇಳಬಯಸುತ್ತೇನೆ

ಶೀ ಎಸ್ ಎ ರವೀಂದನಾಥ್ ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ ನನ್ನ ಗಮನಕ್ಕೆ ಬಂದರೆ ಯಾವ ಸಕ್ಕರೆ ಕಂಪನಿಯವರು ಆ ರೀತಿ 15 ರಿಂದ 25 ಪರ್ಸಂಟ್ cut ಮಾಡುತ್ತಿದ್ದಾರೆ, ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ

ಶೀ ಸಿದ್ದು ಸವದಿ IC ಅಗರ ಜಾತಿ ಕಬ್ಬಿಗೆ 15 ರಿಂದ 25 ಪರ್ಸೆಂಟ್‌ವರೆಗೆ ಕಟಾವು ಮಾಡಿದ್ದಾರೆ, ಅದರ ಬಗ್ಗೆ ತಾವು ಮಾಹಿತಿಯನ್ನು ತರಿಸಿಕೊಳ್ಳಬೇಕು

ಅಧ್ಯಕ್ಷರು ನಿಖರವಾಗಿ ತಾವು ಯಾರ ಮೇಲೆ ದೂರು ಇದೆ ಎಂದು ಮಾಹಿತಿ ಕೊಡಿ ಅವರಿಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ ಅವರು enquiry ಮಾಡುವುದಕ್ಕೆ ready ಇದ್ದಾರಲ್ಲ

ಶೀ ಸಿದ್ದು ಸವದಿ ಸಮೀರ್‌ವಾಡಿ factory, ಪಭುಲಿಂಗೇಶ್ವರ factory ಮತ್ತು ಜಮಖಂಡಿ sugar factory ಈ ರೀತಿ ಎಲ್ಲಾ factories 8011 ಕಬ್ಬಿಗೆ 15 ರಿಂದ 25 ಪರ್ಸೆಂಟ್ ಕಬ್ಬು ಕಟಾವ್ ಮಾಡಿ ಕಬ್ಬನ್ನು ಸಾಗಾಣಿಕೆಗೆ order ಕೊಡುತ್ತಿದ್ದಾರೆ ಅದರ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ

ಶೀ ಎಸ್ ಎ ರವೀಂದನಾಥ್ ತಾವು ಬರೆದುಕೊಟ್ಟರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತಹ ಪಯತ್ನ ಮಾಡುತ್ತೇನೆ

ರಾಜ್ಯದ ರೈತರಿಗೆ ಬೆಳೆವಿಮೆ ವಿತರಿಸುವ ಬಗ್ಗೆ

49(249) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದ ರೈತರಿಗೆ ಕಳೆದ ಒಂದು ವರ್ಷದಿಂದ (ದಿನಾಂಕ 15 01 2007 ರವರೆಗೆ) ಎಷ್ಟು ಮೊತ್ತದ ಬೆಳೆ ವಿಮೆಯನ್ನು ವಿತರಣೆ ಮಾಡಲಾಗಿದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) ,

ಆ) ಈ ಅವಧಿಯಲ್ಲಿ ಎಷ್ಟು ಮೊತ್ತದ ಬೆಳೆ ವಿಮೆಯನ್ನು ಪಾವತಿ ಮಾಡಲು ಉದ್ದೇಶಿಸಲಾಗಿತ್ತು ,

ಇ) ಬೀದರ್ ಜಿಲ್ಲೆಯಲ್ಲಿ ಎಷ್ಟು ಬೆಳೆ ವಿಮೆ ಬಾಕಿ ಇದೆ (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು) ,

ಈ) ಬೆಳೆ ವಿಮೆ ನಿಗದಿತ ಸಮಯದಲ್ಲಿ ಪಾವತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಮಾನ್ಯ ಕೃಷಿ ಸಚಿವರು)

ಅ) 2005–06 ಸಾಲಿನಿಂದ 15 01 2007 ರವರೆಗೆ ರಾಜ್ಯದಲ್ಲಿ ಒಟ್ಟು 2 52 ಲಕ್ಷ ರೈತರಿಗೆ ಒಟ್ಟು ರೂ 82 75 ಕೋಟಿಗಳ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿತರಣೆ ಮಾಡಲಾಗಿದ್ದು, ಇದರ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಈ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟು ರೂ 88 26 ಕೋಟಿಗಳ ಬೆಳೆ ವಿಮಾ ನಷ್ಟ ಪರಿಹಾರ ಪಾವತಿ ಮಾಡಬೇಕಾಗಿತ್ತು ಆದರೆ ಇದರ ಪೈಕಿ ರೂ 82 75 ಕೋಟಿಗಳನ್ನು ಪಾವತಿಸಲಾಗಿದೆ

ಇ) ಬೀದರ್ ಜಿಲ್ಲೆಯಲ್ಲಿ ವಿಧಾನ ಸಭಾ ಕ್ಷೇತ್ರವಾರು ಪಾವತಿಸಬೇಕಾದ ಬೆಳೆ ವಿಮಾ ಪ್ರಕರಣ ವಿವರಗಳು ಹೀಗಿವೆ

ವಿಧಾನ ಸಭಾ ಕ್ಷೇತ್ರ	ಫಲಾನುಭವಿ ರೈತರ ಸಂಖ್ಯೆ	ಬೆಳೆವಿಮಾ ನಷ್ಟ ಪರಿಹಾರ (ಲಕ್ಷ ರೂ)
1 ಹುಲಸೂರು	30	0 82
2 ಭಾಲ್ಕಿ	132	6 76
3 ಬೀದರ್	2	0 02
4 ಔರಾದ್	–	–
5 ಹುಮ್ನಾಬಾದ್	–	–
6 ಬಸವ ಕಲ್ಯಾಣ	–	–
ಒಟ್ಟು	164	7 60

ಈ) ಇಳುವರಿ ಮಾಹಿತಿಯನ್ನು ನಿಗದಿತ ಅವಧಿಯೊಳಗಾಗಿ ವಿಮಾ ಸಂಸ್ಥೆಗೆ ಕಳುಹಿಸುವ ಮೂಲಕ ವಿಮೆ ಹಣವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

Annexure-1

2005–06ನೇ ಸಾಲಿನಿಂದ 15–01–2007ರವರೆಗೆ ರಾಜ್ಯದ ರೈತರಿಗೆ ವಿತರಿಸಲಾದ ಬೆಳೆ ವಿಮಾ ನಷ್ಟ ಪರಿಹಾರದ ಜಿಲ್ಲಾವಾರು ವಿವರ

ಸಂಖ್ಯೆ	ಜಿಲ್ಲೆಯ ಹೆಸರು	ಪಾಲ್ಗೊಂಡ ರೈತರ ಸಂಖ್ಯೆ	ಫಲಾನುಭವಿ ರೈತರ ಸಂಖ್ಯೆ	ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷರೂ ಗಳಲ್ಲಿ)
1	ಬೆಂಗಳೂರು	937	18	1 39
2	ಬೆಳಗಾವಿ	185543	9433	211 58

3	ಬಳ್ಳಾರಿ	19157	3278	234 43
4	ಬೀದರ್	234080	89218	1361 42
5	ಬಿಜಾಪುರ	49990	4226	186 90
6	ಚಿಕ್ಕಮಗಳೂರು	33692	474	19 82
7	ಚಿತ್ರದುರ್ಗ	24735	5745	240 64
8	ದಕ್ಷಿಣ ಕನ್ನಡ	824	0	0 00
9	ಧಾರವಾಡ	225510	22853	1103 85
10	ಗುಲ್ಬರ್ಗಾ	300953	14473	308 33
11	ಹಾಸನ	112151	43530	1703 89
12	ಕೋಲಾರ	5525	1077	13 78
13	ಮಂಡ್ಯ	3626	0	0 00
14	ಮೈಸೂರು	17722	5663	56 41
15	ರಾಯಚೂರು	66955	6291	287 86
16	ಶಿವಮೊಗ್ಗ	86251	2980	55 46
17	ತುಮಕೂರು	24244	10514	622 41
18	ಉತ್ತರ ಕನ್ನಡ	71653	313	3 76
19	ಕೊಡಗು	24560	0	0 00
20	ಕೊಪ್ಪಳ	34468	3509	89 99
21	ಚಾಮರಾಜನಗರ	20525	453	18 86
22	ದಾವಣಗೆರೆ	61987	990	35 34
23	ಬಾಗಲಕೋಟೆ	31830	3358	73 51
24	ಗದಗ	102054	10487	1154 36
25	ಹಾವೇರಿ	193577	13191	491 23
26	ಉಡುಪಿ	1876	0	0 00
	ಒಟ್ಟು	**1934425**	**252074**	**8275 22**

ಪ್ರಶ್ನೆ ಸಂಖ್ಯೆ 249 ಉತ್ತರ ಲಗತ್ತಿಸಲಾಗಿದೆ

ಶೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಅಧ್ಯಕ್ಷರೆ, ಈ ವರ್ಷದ ವಿಮೆ ಕೂಡ ಬಂದಿಲ್ಲ ಅದನ್ನು ಯಾವಾಗ ಕೊಡುತ್ತೀರಿ? ಈ ವಿಮೆ ಸಿಸ್ಟಂ ಏನಿದೆ ಅದನ್ನು ಸ್ವಲ್ಪ change ಮಾಡಬೇಕಾಗುತ್ತದೆ ಏನಾಗಿದೆ ಎಂದರೆ ಒಂದು ಊರಿನಲ್ಲಿ ಮಳೆ ಬಿದ್ದರೆ, ಇನ್ನೊಂದು ಊರಿನಲ್ಲಿ ಮಳೆ ಬೀಳುವುದಿಲ್ಲ ಇದನ್ನು village-wise ಮಾಡುವುದಕ್ಕೆ ಏನಾದರೂ ಒಂದು ನೀತಿ ತಯಾರು ಮಾಡುತ್ತೀರಾ? ನಿಮ್ಮ ಕಡೆಯಿಂದ ನೀವು ಪ್ರಯತ್ನ ಮಾಡಬೇಕಲ್ಲ, Central Governmentದು ವಿಮೆ ಇದೆ, ಅದು ನನಗೂ ಗೊತ್ತಿದೆ ನೀವು ಮೀಟಿಂಗ್‌ನಲ್ಲಿ ಹೇಳಬೇಕು, ನಮಗೆ ತೊಂದರೆಯಾಗುತ್ತಿದೆ ಎಂದು ನೀವು proposal ಕಳುಹಿಸಬೇಕು ಆದರೆ ತಾವು ಹೇಳಬೇಕಲ್ಲ ಇದನ್ನು ಹೇಳಿ ಏನಾದರೂ ಮಾಡಿ, ಇದನ್ನು ತಾವು ಬದಲಾಯಿಸಲಿಲ್ಲವೆಂದರೆ ಯಾರಿಗೂ ಲಾಭವಾಗುವುದಿಲ್ಲ ಒಂದು ಊರಿನಲ್ಲಿ

ಪೂರ್ತಿ ಬೆಳೆ ಹೋಗುತ್ತಿದೆ ಒಂದು ಹೋಬಳಿಯಲ್ಲಿ ನೋಡಿಕೊಂಡು ಬಂದೆ, ಅಲ್ಲಿ ಏನೂ ಉಪಯೋಗವಾಗುತ್ತಿಲ್ಲ ಹೋಬಳಿಯಾದರೆ ಆಗುತ್ತದೆ ಇಲ್ಲದಿದ್ದರೆ ಇಲ್ಲ, ಇದು ಸರಿಯಾದುದಲ್ಲ ಮೊದಲು ತಾಲ್ಲೂಕು ಇತ್ತು, ಈಗ ಹೋಬಳಿ ಆಗಿದೆ ಅದು village-wise ಆಗುವುದಕ್ಕೆ ತಾವು ಏನಾದರೂ ಪಯತ್ನ ಮಾಡಬೇಕು ಮತ್ತು ಮುಂದಿನ ವರ್ಷದ ವಿಮೆ ಯಾವಾಗ ಕೊಡುತ್ತೀರಿ ? ಈ ವರ್ಷದ್ದು ಇನ್ನು ಬಂದಿಲ್ಲ ಇದು ಯಾವಾಗ ಬರುತ್ತದೆ? ಅದನ್ನು ಯಾವಾಗ ವಿತರಣೆ ಮಾಡುತ್ತಿರಾ?

ಶೀ ಬಂಡೆಪ್ಪ ಕಾಶಂಪೂರ್ ಸನ್ಮಾನ್ಯ ಅಧ್ಯಕ್ಷರೆ, ಈ ಬೆಳೆ ವಿಮೆ ವಿಷಯ ಬಹಳ ಮುಖ್ಯವಾದದ್ದು ಆಗಿದೆ ಸನ್ಮಾನ್ಯ ಸದಸ್ಯರು ಕೇಳಿದ ಪಶ್ನೆಗೆ ಈಗಾಗಲೇ 2005-06ನೇ ಸಾಲಿನ ಖರಿಫ್ ಹಣವನ್ನು ಡಿಪಾಸಿಟ್ ಮಾಡಲಾಗಿದೆ ಈಗ ಪೆಂಡಿಂಗ್ ಇರುವಂಥಾದ್ದು 2004-05ನೇ ಸಾಲಿನದು ರಬಿ ಹಣ 3ಕೋಟಿ 69ಲಕ್ಷ ಹಾಗೂ summer crop ನದು 13ಲಕ್ಷ ರೂಪಾಯಿಗಳು ಇದೆ ಅದು ಬಿಟ್ಟರೆ 2005-06ನೇ ಸಾಲಿನದು ರಬಿ ಹಾಗೂ summer crop ಎರಡು ಸೇರಿ ಒಂದು ಕೋಟಿ 49ಲಕ್ಷ ರೂಪಾಯಿಗಳು ಇದೆ ತಾವು ಈಗ ಕೇಳಿದ್ದು 2006-07ನೇ ಸಾಲಿನ ಖಾರಿಫ್ ಹಣ ಸುಮಾರು 9ಕೋಟಿ ರೂಪಾಯಿಗಳು ಪ್ರೀಮಿಯಮ್ ಬಂದಿದೆ ಈಗ ಅದರ ಈಲ್ಡ್ ಅಸ್ಸೆಸ್‌ಮೆಂಟ್ ನಡೆಯುತ್ತಿದೆ ತಮಗೆ ಗೊತ್ತಿರುವಂತೆ crop cutting experiments ಎಲ್ಲಾ ಬಹಳಷ್ಟು ವಿಳಂಬವಾಗುತ್ತಿದೆ ಇಂತಹ ಸಂದರ್ಭದಲ್ಲಿ ನಾನು ಸಾಕಷ್ಟು ಮೀಟಿಂಗ್‌ಗಳನ್ನು ಮಾಡಿ, ಇದರಲ್ಲಿ ಸಾಕಷ್ಟು ಬದಲಾವಣೆಯನ್ನು ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ ಇನ್ನು ಮಾನ್ಯ ವಿರೋಧಪಕ್ಷದ ನಾಯಕರು ಈ ಬರಗಾಲದ ಬಗ್ಗೆ ಚಿಂತನೆಯನ್ನು ಮಾಡಿ ಹೇಳಿದಾಗ ನಮಗೂ ಏನು ಅನಿಸುತ್ತದೆಂದರೆ, ಮುಂದಿನ ದಿವಸಗಳಲ್ಲಿ ರೈತರ ಸಂಕಷ್ಟದಲ್ಲಿ ಈ ಬೆಳೆ ವಿಮೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ ಅದುದರಿಂದ ನಾವು ಏನು ಮಾಡಿದ್ದೇವೆಂದರೆ ಇದಕ್ಕೆ ಸಂಬಂಧಪಟ್ಟ "ನ್ಯಾಷನಲ್ ಇನ್ಸುರೆನ್ಸ್ ಕಂಪನಿ' ಯವರನ್ನು ಕರೆಸಿ, ಈ ಖರಿಫ್‌ನಲ್ಲಿ ಎರಡು ಬೆಳೆಯನ್ನು ಮಾಡಬೇಕು ಒಂದು short duration crops ಮತ್ತೊಂದು long duration crops ಎಂದು ಮಾಡಬೇಕು ಇದರಲ್ಲಿ short duration crops ನಮ್ಮ ಇಲಾಖೆ ಕಡೆಯಿಂದ ಈಲ್ಡ್ ಡಾಟಾ ಎಲ್ಲಾ ಡಿಸೆಂಬರ್ ತಿಂಗಳ ಕೊನೆಯಲ್ಲಿ ಕೊಟ್ಟಿದ್ದೇವೆ ಆ ಬಗ್ಗೆ ಅವರು ತೀರ್ಮಾನವನ್ನು ತೆಗೆದುಕೊಂಡು, ಅದನ್ನು ಕೇಂದ ಸರ್ಕಾರಕ್ಕೆ ಕಳುಹಿಸಿ, ಅದರದೇ ಆದಂತಹ ಪ್ರೀಮಿಯಮ್ ಅನ್ನು ಹೇಳಿದರೆ, ನಾವು ಅದಕ್ಕೆ ಅರ್ಧ ಭಾಗ ಏನು ಕೊಡಬೇಕು ಅದನ್ನು ನಾವು ಕೊಡುತ್ತೇವೆ. ನಾವು ಇದರಲ್ಲಿ ಸಾಕಷ್ಟು ಬದಲಾವಣೆಗಳನ್ನು ತರಬೇಕಾಗಿದೆ ಇದರ ಬಗ್ಗೆ ಕೇಂದ ಸರ್ಕಾರದ ಚಿಂತನೆ ಏನು ಇದೆ, ಅದರ ಬಗ್ಗೆ ಅವರು ಲೆಕ್ಕವನ್ನು

ಹಾಕಬೇಕೆಂಬ ನಿಟ್ಟಿನಲ್ಲಿ ನಾನು ಹೇಳಬಯಸುತ್ತೇನೆ ನಮ್ಮ ಕಡೆಯಿಂದ ಯಾವುದೇ ರೀತಿಯಿಂದಲೂ ವಿಳಂಬವಾಗುತ್ತಿಲ್ಲ ನಾವು ಈಗ ಜನವರಿ, ಮಾರ್ಚ್ ತಿಂಗಳಲ್ಲಿ ಕೊಡುವ ಡಾಟಾವನ್ನು ಈ short duration cropನ ಹಣವನ್ನೆಲ್ಲಾ ಡಿಸೆಂಬರ್‌ನಲ್ಲೆ ಕೊಟ್ಟಿದ್ದೇವೆ ಇನ್ನು ಬಾಕಿ ಇರುವ long duration crop ನದು ಈಗ ಕಟಿಂಗ್ ನಡೆಯುತ್ತಿದೆ ತಾವು ಏನು ಹೋಬಳಿವಾರು ಹೇಳಿದ್ದೀರಿ, ಈಗ ಪದ್ದತಿ ಇರುವಂಥಾದ್ದು ಹೋಬಳಿವಾರು crop cutting experiments 20 ಮಾಡಬೇಕೆಂದು ಇದೆ ಅದರಲ್ಲಿ ನಾವು ಮೊದಲನೆಯ ಹಂತದಲ್ಲಿ ಅದಕ್ಕಿಂತ ಶೇ 20 ಹೆಚ್ಚಿಗೆ ತೆಗೆದುಕೊಳ್ಳಿಯೆಂದು ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ ಆದರೆ ನಮ್ಮಲ್ಲಿ ಪಂಚಾಯತ್‌ವಾರು ಮಾಡಬೇಕೆಂಬ ವಿಚಾರ ಪರಿಶೀಲನೆಯಲ್ಲಿ ಇದೆ ಅದಕ್ಕೆ ಇನ್ನು ಹೆಚ್ಚಿನ ಪಮಾಣದ ಬಜೆಟ್ ಬೇಕಾಗುತ್ತದೆಂದು ಹೇಳಿ, ಅದನ್ನು ಹಾಗೆ ಇಟ್ಟಿದ್ದೇವೆ ಈ ಮುಂದಿನ ದಿವಸಗಳಲ್ಲಿ ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇವೆ

ಶೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಶೀ ಶರತ್ ಪವಾರ್‌ರವರು ಹೈದರಾಬಾದ್‌ನಲ್ಲಿ ದಕ್ಷಿಣ ಭಾರತದ Agriculture Ministers' Conference ಅನ್ನು ಕರೆದಿದ್ದರು ಅದಕ್ಕೆ ತಾವು ಕೂಡ ಹೋಗಿದ್ದೀರಿ ಇವೆಲ್ಲಾ ವಿಚಾರಗಳು ಪಸ್ತಾಪವಾಗಿ, ಏನಾದರೂ ಡಿಸ್‌ಕಷನ್ ಆಗಿರಬೇಕು ನನಗೆ ತಿಳಿದಮಟ್ಟಿಗೆ ಇಡೀ ನಮ್ಮ ರಾಷ್ಟ್ರ ಮಟ್ಟದಲ್ಲಿ ಪಪಥಮವಾಗಿ Agriculture Minister ಶೀ ಶರತ್ ಪವಾರ್‌ರವರು ಈ ಸಮ್ಮೇಳನವನ್ನು ಮಾಡಿದ್ದಾರೆ ಅವರು ಒಬ್ಬ agriculturist ಆಗಿದ್ದಾರೆ, ಮತ್ತೆ ರೈತರ ಸಮಸ್ಯೆ ಬಗ್ಗೆ, ವಿಮೆ ಬಗ್ಗೆ, ಎಲ್ಲದ್ದರ ಬಗ್ಗೆ ಹೆಚ್ಚು ಚಿಂತನೆಯನ್ನು ಮಾಡಿದ್ದಾರೆ ಅದಕ್ಕೆ ತಾವು ಹೈದರಾಬಾದ್‌ಗೆ ಹೋಗಿದ್ದೀರಿ ಅಲ್ಲಿ ಡಿಸ್‌ಕಷನ್ ಏನು ಆಯಿತು? ತಾವು ಪಾಲುಗೋಂಡಿದ್ದೀರಿ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಏನೇನು ವಿಷಯಗಳನ್ನು ಪಸ್ತಾಪ ಮಾಡಿದ್ದೀರಿ? ಇಲ್ಲಿನ ಸಮಸ್ಯೆಗಳ ಏನು ವಿಚಾರ ಮಾಡಿದ್ದೀರಿ? What is the outcome of that meeting

ಶೀ ಬಂಡೆಪ್ಪ ಕಾಶಂಪೂರ್ ಸನ್ಮಾನ್ಯ ಅಧ್ಯಕ್ಷರೆ, ಹಿರಿಯರಾದ ಮಾನ್ಯ ವಿರೋಧಪಕ್ಷದ ನಾಯಕರು, ಹೇಳಿದ ಹಾಗೆ ಹೈದರಾಬಾದ್‌ನಲ್ಲಿ ಮೀಟಿಂಗ್ ಆದಂತಹ ಸಂದರ್ಭದಲ್ಲಿ

ಶೀ ಗುರುಪಾದಪ್ಪ ನಾಗಮಾರಪಲ್ಲಿ ಮಾನ್ಯ ಆಧ್ಯಕ್ಷರೆ, ನಾನು ಒಂದು ಪಶ್ನೆಯನ್ನು ಪಸ್ತಾಪ ಮಾಡುತ್ತೇನೆ, ನಂತರ ಮಾನ್ಯ ಮಂತಿಯವರು ಉತ್ತರವನ್ನು ಕೊಡಲಿ ಈ ಯೋಜನೆಯ ಬಗ್ಗೆ ಮೊದಲು ಪಂಚಾಯತ್‌ವಾರು ಚರ್ಚೆಯಾಗುತ್ತಿತ್ತು ಈಗ ನಾನು ವಿಲೇಜ್‌ವಾರು ಎಂದು ಏಕೆ ಹೇಳುತ್ತಿದ್ದೇನೆಂದರೆ, ಒಂದು ಊರಿನಲ್ಲಿ ಮಳೆ ಬಿದ್ದರೆ,

ಇನ್ನೊಂದು ಊರಿನಲ್ಲಿ ಮಳೆಯಾಗುವುದಿಲ್ಲ ಈ ಪ್ರಾಬ್ಲಂ ಇದೆ ಅದಕ್ಕೆ ನಾನು village-wise proposal ಅನ್ನು ಕಳುಹಿಸಿ ಎಂದು ಹೇಳುತ್ತಿದ್ದೇನೆ ಅದಕ್ಕೆ ತಾವು village-wise proposal ಅನ್ನು ಕಳುಹಿಸುತ್ತಿರಾ? ಅದನ್ನು ತಾವು ಹೇಳಿ

ಶ್ರೀ ಬಂಡೆಪ್ಪ ಕಾಶಂಪೂರ್ ಮಾನ್ಯ ಅಧ್ಯಕ್ಷರೆ, ಹೈದರಾಬಾದ್‌ನಲ್ಲಿ ಮೀಟಿಂಗ್ ನಡೆದಂಧಾದ್ದು, ವಿಶೇಷವಾಗಿ ರೈತರ ಆತ್ಮಹತ್ಯೆಯ ಪ್ಯಾಕೇಜ್ ಬಗ್ಗೆ ನಮಗೆಲ್ಲಾ ಗೊತ್ತಿರುವ ಹಾಗೆ ವಿಶೇಷವಾಗಿ ನಮ್ಮ ರಾಜ್ಯದಲ್ಲಿ 6 ಜಿಲ್ಲೆಗಳಿಗೆ ಈ ಪ್ಯಾಕೇಜ್ ಬಂದಿದೆ ಈ ಬೆಳೆ ವಿಮೆ ಬಗ್ಗೆ ಹೇಳಬೇಕೆಂದರೆ, ನಾನು ಮತ್ತು ಮಾನ್ಯ ಮುಖ್ಯಮಂತಿಯವರು ಕೇಂದ ಸರ್ಕಾರದ ಕೃಷಿ ಸಚಿವರಿಗೆ ಮನವಿಯನ್ನು ಕೊಟ್ಟಿದ್ದೇವೆ ನಮ್ಮದು ಜುಲೈ 31ನೇ ತಾರೀಖಿಗೆ ನಮ್ಮ cut off date ಇತ್ತು ನಮಗೆ ಇನ್ನು ಒಂದು ತಿಂಗಳು extention ಕೊಡಬೇಕೆಂದು ಮನವಿಯನ್ನು ಮಾಡಿಕೊಂಡಿದ್ದೆವು ಇನ್ನು ಒಂದು ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಏನು ಆಗುತ್ತಿದೆಯೆಂದರೆ, ಲೋನ್ ಅನ್ನು ತೆಗೆದುಕೊಳ್ಳುವ ಜನರೇ ಹೆಚ್ಚು ಬೆನಿಫಿಟ್ ಅನ್ನು ಪಡೆಯುತ್ತಿದ್ದಾರೆ ನಾನ್ ಲೋನ್‌ನವರು ಮುಂದೆ ಬರುತ್ತಿಲ್ಲ ಆದರೆ ಇವತ್ತು ಈ ಬರಿಗಾಲದ ಪರಿಸ್ಥಿತಿಯನ್ನು ನೋಡಿದರೆ, ಇದರಲ್ಲಿ ರೈತರು ಆಸಕ್ತಿಯನ್ನು ವಹಿಸಿ, ಆ cut off date ಏನು ಇದೆ, ಅದರೊಳಗೆ ಇನ್‌ಶ್ಯೂರೆನ್ಸ್ ಅನ್ನು ಮಾಡಿಸಿದರೆ, ಇವತ್ತು ಇಡೀ ರಾಷ್ಟ್ರದಲ್ಲಿ ನಮ್ಮ ಕರ್ನಾಟಕ ರಾಜ್ಯ ಬೆಳೆ ವಿಮೆಯನ್ನು ಪಡೆದಿರುವುದರಲ್ಲಿ ಎರಡನೇಯ ಸ್ಥಾನದಲ್ಲಿ ಇದೆ ಗುಜರಾತ್ ಮೊದಲನೇಯ ಸ್ಥಾನದಲ್ಲಿ ಇದೆ, ನಮ್ಮ ಕರ್ನಾಟಕ ರಾಜ್ಯ ಎರಡನೆಯ ಸ್ಥಾನದಲ್ಲಿ ಇದೆ ನಾವು 2000ನೇ ಇಸವಿಯಿಂದ ಇಲ್ಲಿಯವರೆಗೂ ವಿಮೆ ಹಣ 250 ಕೋಟಿ ಪ್ರೀಮಿಯಮ್‌ನಲ್ಲಿ ಸುಮಾರು 1,050 ಕೋಟಿ ರೂಪಾಯಿಗಳು ಸೆಟಲ್‌ಮೆಂಟ್ ಆಗಿದೆ ಇದನ್ನು ಇನ್ನು ಹೆಚ್ಚಿನ ಪ್ರಮಾಣದಲ್ಲಿ ಬೆನಿಫಿಟ್ ತೆಗೆದುಕೊಳ್ಳಬೇಕಾಗಿದೆ ಇದರಲ್ಲಿ crop cutting experiments ಇನ್ನು ಪಂಚಾಯತ್‌ವಾರಿನಲ್ಲೆ ಪರಿಶೀಲನೆಯಲ್ಲಿ ಇದೆ ಅದುದರಿಂದ ವಿಲೇಜ್‌ವಾರು ದೂರ ಉಳಿದಿದೆ ಮೊದಲು ಪಂಚಾಯತ್‌ವಾರಿನಲ್ಲೆ ತೆಗೆದುಕೊಳ್ಳುವುದಕ್ಕೆ ಇನ್ನು ಪರಿಶೀಲನೆಯಲ್ಲಿ ಇದೆ ಆದುದರಿಂದ ಮುಂದಿನ ದಿವಸಗಳಲ್ಲಿ ಪರಿಣಾಮಕಾರಿ ಬದಲಾವಣೆಯನ್ನು ತರೋಣವೆಂದು ತಮ್ಮ ಮುಖಾಂತರ ತಿಳಿಸಬಯಸುತ್ತೇನೆ

ಅಧ್ಯಕ್ಷರು ಮಾನ್ಯ ಜಿ ಎ ಶ್ರೀರಾಮರೆಡ್ಡಿಯವರ ಪ್ರಶ್ನೆಯನ್ನು ತೋಟಗಾರಿಕೆ ಇಲಾಖೆಯಿಂದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ವರ್ಗಾವಣೆಗೊಂಡಿದೆ